# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 07 ಬ್ಯಾಟರಾಯನಪುರ ವಾರ್ಡ್ ಸಮಿತಿ ಸಭೆಯ ನಡವಳಿ.

**ದಿನಾಂಕ 06.03.2021 ರಂದು ವಾರ್ಡ್ ಕಛೇರಿಯಲ್ಲಿ ಬೆಳ್ಳಿಗೆ 10.30 ಕ್ಕೆ ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

ವಾರ್ಡ್ ನಂ.07, ಬ್ಯಾಟರಾಯನಪುರ ವಾರ್ಡ್‌ಗೆ ಮಾನ್ಯ ಆಯುಕ್ತರ ಆದೇಶದಂತೆ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿರುವ ಶ್ರೀ.ಪ್ರಕಾಶ್.ಜಿ ರವರು ಸಭೆಯಲ್ಲಿ ಹಾಜರಿದ್ದು, ಈ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಗಮನ ಹರಿಸಿ, ಕೈಗೊಂಡ ಕ್ರಮದ ಬಗ್ಗೆ ಚರ್ಚಿಸಲಾಯಿತು.

1. **ಘನತ್ಯಾಜ್ಯ ನಿರ್ವಹಣೆ:**
   1. ದಿನಾಂಕ:22.02.2021 ರಿಂದ ವಾರ್ಡ್ 07 ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ ಘನತ್ಯಾಜ್ಯಾ ನಿರ್ವಹಣೆಗೆ ಸಂಬಂದಿಸಿದಂತೆ. ಹೊಸದಾಗಿ ಗುತ್ತಿಗೆದಾರರು ಕಾರ್ಯನಿರ್ವಹಸಿಲು ಪ್ರಾರಂಭಿಸುವುದಾಗಿ ತಿಳಿಸಿರುತ್ತಾರೆ. ಸದರಿ ಪ್ರಾರಂಭಿಸಿರುವ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದರ ಬಗ್ಗೆ ಬೇಸರ ವ್ಯಕ್ತಪಡಿಸಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ರಸ್ತೆಗಳಲ್ಲಿ ಕಸ ಬಿದ್ದಿರುವುದು, ಮನೆ ಮನೆಗಳಲ್ಲಿ ಕಸ ಸಂಗ್ರಹಣೆ ಮಾಡದೇ ಇರುವುದರ ಬಗ್ಗೆ ಸಹ ದೂರುಗಳು ಬಂದಿರುತ್ತದೆ. ಅದ್ದರಿಂದ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿಯ ಸದಸ್ಯರು ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುವಂತೆ ಕ್ರಮವಹಿಸಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ.
   2. ಹೊಸದಾಗಿ ಕೆಲಸ ನಿರ್ವಹಿಸುರತ್ತಿರುವ ಆಟೋ ಟಿಪ್ಪರ್‌ಗಳ ಹಿಂದೆ ಪಾಲಿಕೆ ಪೌರಕಾರ್ಮಿಕರನ್ನು ನಿಯೋಜಿಸಿ ಮನೆ ಮನೆಗಳಿಂದ ಕಸ ಸಂಗ್ರಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಕ್ರಮವಹಿಸಲು ಅಭಿಪ್ರಾಯಪಟ್ಟಿರುತ್ತಾರೆ.
   3. ಮಾರ್ಷಲ್‌ಗಳನ್ನು ಕಾಂಪ್ಯಾಟಕ್ಟರ್ ನಿರ್ವಹಣೆಯ ಉಸ್ತುವಾರಿಯನ್ನು ಕೊಟ್ಟು ರಸ್ತೆ ಬದಿಯಲ್ಲಿ ಬಿದ್ದಿರುವ ಕಸವನ್ನು ತೆರವು ಮಾಡಲು ಕ್ರಮವಹಿಸಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ.
   4. ಘನತ್ಯಾಜ್ಯ ನಿರ್ವಹಣೆಗೆ ನಿಯೋಜಿಸಿರುವ ಆಟೋ ಟಿಪ್ಪರ್/ಕಾಂಪ್ಯಾಕ್ಟರ್ ಗಳಿಗೆ ಇಂಧನ ಪೂರೈಕೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ಗುತ್ತಿಗೆದಾರರಿಗೆ ಸೂಚಿಸಲಾಯಿತು.
   5. ವಾರ್ಡ್–07 ರ ಕಛೇರಿ ಆವರಣದಲ್ಲಿರುವ ಕಾಂಪ್ಯಾಕ್ಟರ್/ಟ್ರಾಕ್ಟರ್ ವಾಹನವನ್ನು ದುರಸ್ಥಿ ಕಾರ್ಯವನ್ನು ಕೂಡಲೇ ನಿರ್ವಹಿಸಲು ಕ್ರಮ ವಹಿಸುವುದು.
2. **ಆರೋಗ್ಯ ಇಲಾಖೆ:**
   1. ವಸತಿ ಸಮುಚ್ಚಯಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪರಿಶೀಲಿಸಲು ನಿಯಮಿತ ತಪಾಸಣೆಯನ್ನು ಕೈಗೊಳ್ಳುವುದು.

2. ಅಂಗಡಿಗಳ ಮಾಲೀಕರು ವ್ಯಾಪಾರ ಪರವಾನಿಗೆಯನ್ನು ಪಡೆಯದೇ ವ್ಯಾಪಾರ ಮಾಡುತ್ತಿರುವವರ ವಿರುದ್ಧ ಕ್ರಮಕೈಗೊಳ್ಳುವುದು.
3. ಪ್ಲಾಸ್ಟಿಕ್ ಬಳಕೆ ನಿಷೇದದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮುಡಿಸಿ ಮತ್ತು ಅಂಗಡಿಗಳಲ್ಲಿ ಪ್ಲಾಸ್ಟಿಕ್ ಬಳಕೆ ಕಂಡುಬಂದಲ್ಲಿ ಪ್ಲಾಸ್ಟಿಕ್ ಸೀಜ್ ಮಾಡುವ ಕೆಲಸವನ್ನು ವ್ಯಾಪಕವಾಗಿ ನಿರ್ವಹಿಸುವುದು.

3. **ಕಾಮಗಾರಿ ವಿಭಾಗ:**

1. ಸಭೆಯಲ್ಲಿ ಹಾಜರಿದ್ದವರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲೇ ರಸ್ತೆ ಗುಂಡಿಗಳು ಕಂಡುಬಂದ್ದಲ್ಲಿ ಕೂಡಲೇ ವಾರ್ಡ್ ಕಛೇರಿಗೆ ಅಥವಾ ವಾರ್ಡ್ ಅಭಿಯಂತರರಿಗೆ ತಿಳಿಸಲು ಮನವಿ ಮಾಡಲಾಯಿತು.

4. **ವಿದ್ಯುತ್ (ಬೀದಿ ದೀಪಗಳ ನಿರ್ವಹಣೆ) ವಿಭಾಗ:**

1. ಬೀದಿ ದೀಪಗಳ ನಿರ್ವಹಣೆ ಅತ್ಯಂತ ಪ್ರಮುಖವಾದ ಕೆಲಸವಾಗಿದ್ದು, ಬೀದಿ ದೀಪಗಳನ್ನು ಅದಷ್ಟು ಸುಸ್ಥಿತಿಯಲ್ಲಿಡುವುದು.
2. ವಾರ್ಡ್ ವ್ಯಾಪ್ತಿಯಲ್ಲಿ ಆಳವಡಿಸಲಾಗಿರುವ ಎಲ್.ಇ.ಡಿ ವಿದ್ಯುತ್ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಕ್ರಮವಹಿಸುವುದು.

5. **ಕಂದಾಯ ವಿಭಾಗ:**

1. ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಪಾವತಿಯನ್ನು ಬಾಕಿ ಉಳಿಸಿಕೊಂಡಿರುವ ಪ್ರಮುಖ ಸಂಸ್ಥೆಗಳನ್ನು ಗುರುತಿಸಿ ಇವುರುಗಳಿಂದ ಕಂದಾಯವನ್ನು ವಸೂಲಿ ಮಾಡಲು ಸೂಕ್ತ ಕ್ರಮಕೈಗೊಳ್ಳಲುವುದು.
2. ಮುಂದಿನ ಸಭೆಗೆ, ವಾರ್ಡ್ ವ್ಯಾಪ್ತಿಯಲ್ಲಿ, DWCC AND Bio methanisationplant ಘಟಕವನ್ನು ನಿರ್ಮಿಸಲು, ವಾರ್ಡ್‌ನಲ್ಲಿ ಲಭ್ಯವಿರುವ ಸರ್ಕಾರಿ ಜಾಗವನ್ನು ಗುರುತಿಸಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ, ಕಂದಾಯ ಇಲಾಖೆಯ ಅಧಿಕಾರಿಗಳಿಗೆ ನೋಡೆಲ್ ಅಧಿಕಾರಿಯವರು ಸೂಚಿಸಿದರು.

6. **ಜಲಮಂಡಳಿ ವಿಭಾಗ:**

1. ರಸ್ತೆ ಡಾಂಬರೀಕರಣ ಮುಗಿದ ನಂತರ ಸ್ಯಾನಿಟರಿ ಚೇಂಬರ್‌ಗಳ ಮಟ್ಟವನ್ನು ರಸ್ತೆ ಮಟ್ಟಕ್ಕೆ ಸರಿಪಡಿಸುವುದು.
2. ಮರಿಯಣ್ಣಪಾಳ್ಯದ ಹೀರಾ ಕೆಟರ್ಸ್ ರಸ್ತೆಯಲ್ಲಿ ನಿರ್ವಹಿಸಿರುವ ಓಳಚರಂಡಿ ಕಾಮಗಾರಿಯ ಇಳಿಜಾರು ಸರಿಯಿಲ್ಲದೆ ಇದ್ದು, ಇದನ್ನು ಕೂಡಲೇ ಪರಿಶಿಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿರುತ್ತಾರೆ.
3. ತಮ್ಮ ಇಲಾಖೆ ವತಿಯಿಂದ ರಸ್ತೆ ಅಗೆದರೆ ಅದನ್ನು ನಿಯಾಮಾನುಸಾರ ಸರಿಪಡಿಸುವುದು.

7. **ತೋಟಗಾರಿಕೆ:**

1. ಉದ್ಯಾನವನ ಗಳ ನಿರ್ವಹಣೆಯ ಗುತ್ತಿಗೆದಾರರಿಗೆ ನಿರ್ವಹಣಾ ಬಿಲ್ ನ್ನು ಸುಮಾರು 2 ವರ್ಷಗಳಿಂದ ಪಾವತಿ ಹಾಗದೆ ಇದ್ದು, ಇದರಿಂದ ಉದ್ಯಾನವನಗಳ ನಿರ್ವಹಣೆ ಕಷ್ಟವಾಗುತ್ತಿರವುದರ ಬಗ್ಗೆ ತೋಟಗಾರಿಕೆ ಅಧೀಕ್ಷಕರು ತಿಳಿಸಿದರು.

2. ಉದ್ಯಾನವನಗಳಲ್ಲಿ ಈಗಾಗಲೇ ನಿರ್ಮಿಸಿರುವ ಸಾರ್ವಜನಿಕರ ಶೌಚಾಲಯಗಳ ನಿರ್ವಹಣೆ ಕೆಲಸದಲ್ಲಿ ಯಾರಾದರೂ ಆಸಕ್ತಿವುಳ್ಳವರು ವಾರ್ಡ್ ಕಛೇರಿಗೆ ಅರ್ಜಿ ನೀಡಬೇಕೆಂದು ಸಭೆಯಲ್ಲಿ ಹಾಜರಿದ್ದವರಿಗೆ ಮನವಿ ಮಾಡಲಾಯಿತು.
3. 1.ಗುಂಡಾಜಿನೇಯಾ ದೇವಸ್ಥಾನ,2.ಸಹಕಾರನಗರ ಏ ಬ್ಲಾಕ್,3.ಜಿಕಿವಿಕೆ ಬಡಾವಣೆ,4.ಕಾಫಿ ಬೋರ್ಡ್ ಬಡಾವಣೆಯ ಉದ್ಯಾನವನಗಳಲ್ಲಿ ನಿರ್ಮಿಸಲಾಗಿರುವ ಎಲೆ ತ್ಯಾಜ್ಯಾ ಸಂಸ್ಕರಣಾ ಘಟಕವನ್ನು ಕಾರ್ಯ ರೂಪಕ್ಕೆ ತರಲಾಗುವುದು ಎಂದು ತಿಳಿಸಲಾಗಿರುತ್ತದೆ.

**8. ಅರಣ್ಯ ಇಲಾಖೆ:-**

1. ಅರಣ್ಯ ವಿಭಾಗದವರು ವಾರ್ಡ್ ಸಮಿತಿ ಸಭೆಗೆ ಹಾಜರಾಗಿರುವುದಲ್ಲ, ನೋಡೆಲ್ ಅಧಿಕಾರಿಯವರು ದೂರವಾಣಿ ಮೂಲಕ ಸಂಪರ್ಕಿಸಿ, ಪಂಪಾ ಬಡಾವಣೆ ಮತ್ತು ಅಮೃತನಗರ ಮಾರುತಿ ಪಾರ್ಮ್ ಹತ್ತಿರ ಪೂರ್ಣವಾಗಿ ಒಣಗಿಹೋಗಿರುವ ಮರಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತೆರವುಮಾಡಬೇಕೆಂದು ಸೂಚಿಸಲಾಗಿರುತ್ತದೆ. ಸದರಿ ವಿಷಯ ಬಗ್ಗೆ ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಸೂಚಿಸಲಾಗಿದೆ.

ಕಾರ್ಯದರ್ಶಿ

ವಾರ್ಡ್ 07